ಸಾಮಾನ್ಯ ಜನಜೀವನದ ನಾಡಿಯನ್ನು ಗ್ರಹಿಸಿ ಕಥೆಯನ್ನುಕಟ್ಟುವವರು ಗುರುಪ್ರಸಾದ್ ಕಂಟಲಗೆರೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನವರು. ವೃತ್ತಿಯಲ್ಲಿ ಶಿಕ್ಷಕ. ಕಥೆ, ಕವಿತೆ ಆಸಕ್ತಿಯ ಕ್ಷೇತ್ರಗಳು. 'ಗೋವಿನ ಜಾಡು', 'ಕೆಂಡದ ಬೆಳುದಿಂಗಳು' (ಕಥಾಸಂಕಲನಗಳು), 'ಕಪ್ಪು ಕೋಣಗಳು' (ಕವನ ಸಂಕಲನ), 'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ' (ಸಂಶೋಧನೆ) ಪ್ರಕಟಿತ ಪುಸ್ತಕಗಳು.

ಇನ್ನೂ ಏನೂ ತಿಳಿಯದ ಬಾಲಕ ಬಂದಿರುವುದನ್ನು ಕಂಡ ಊರೂರ ಹೆಂಗಸರು ಕೆಂಪನಿಗೆ ಪಾಟಾಗಿದ್ದರು. ಬಸವ ಆಚೆಕಡೆ ಗಂಡಸರ ಬೆನ್ನುಜ್ಜುತ್ತಿದ್ದರೆ, ಹೆಂಗಸರು ಮಗ ಕೆಂಪನನ್ನು ಮನೆಯೊಳಗಿನ ಬಚ್ಚಲಿಗೆ ಕರೆಸಿಕೊಂಡು ಬೆನ್ನುಜ್ಜಿಸಿಕೊಳ್ಳುತ್ತಿದ್ದರು.

ಹೀಗೆ ಕೆಂಪ ತನ್ನ ಬಾಲ್ಯದಲ್ಲಿ ಅಪ್ಪನ ದಾರಿಯನ್ನೇ ತುಳಿದುದರಿಂದ ಅನಾಯಾಸವಾಗಿ ಅಪ್ಪನ ಹೆಸರಿನ ಹಿಂದಿದ್ದ ಉಜ್ಜಲ್ ಅನ್ನು ತಾನೂ ಹೊಂದಿ ಉಜ್ಜಲ್ ಕೆಂಪ ಎಂದು ಮನೆಮಾತಾಗಿದ್ದ. ಇದರಿಂದ ಕೆಂಪನಿಗೆ ಅಂಥ ನಷ್ಟವೇನು ಅಪ್ಪಳಿಸದಿದ್ದರೂ ಶಾಲೆಯಲ್ಲಿ ಇವನ ಜೊತೆ ಹುಡುಗರು ಉಜ್ಜಲ್ ಕೆಂಪ ಎಂದು ಅಡ್ಡ ಹೆಸರಿಟ್ಟು ಕೂಗುತ್ತಿದ್ದರು. ಒಮ್ಮೆ ಹೊಸದಾಗಿ ಬಂದಿದ್ದ ಮೇಷ್ಟ್ರು 'ಯಾಕ್ರೊ ಅವ್ನನ್ನ ಅಂಗಂತೀರ' ಎಂದಾಗ ಹಟ್ಟಿಯ ಇನ್ನೊಬ್ಬ ಹುಡುಗ 'ಸಾ ಅವ್ನು ಶನಿವಾರ್ದೊತ್ತು ಹೆಂಗುಸ್ರ ಬೆನ್ನುಜ್ಜಕೆ ಹೋಗ್ತನೆ' ಎಂದಿದ್ದ. ಇದರಿಂದ ಕುತೂಹಲಗೊಂಡ ಮೇಷ್ಟ್ರು ವಿವರವಾಗಿ ಎಲ್ಲವನ್ನೂ ಕೇಳಿ ನಚ್ಚಗಾಗಿದ್ದರು.

ಮೇಷ್ಟ್ರು ಕೇಳಿದ್ದನ್ನೂ, ಜೊತೆ ಹುಡುಗ ಹೇಳಿದ್ದನ್ನೂ ತಂದು ಬೇಜಾರದಿಂದ ಕೆಂಪ ಅವರವ್ವನ ಕುಟ್ಟೆ ಹೇಳಿದಾಗ, ಉಜ್ಜಲ್ ಬಸವನ ಹೆಂಡ್ರು ಶಿವಮ್ಮ ಗಂಡನಿಗೆ 'ಇನ್ನೊಂದಿನ ಕೆಂಪುನ್ನ ಕರ್ಕಂಡು ಹೋಗ್ಗೀಗಿಯ' ಎಂದು ಕಟ್ನಿಟ್ ಮಾಡಿದ್ದಳು. ಅಂದಿನಿಂದ ಕೆಂಪ ಅವರಿವರ ಬೆನ್ನುಜ್ಜದ್ರಿಂದ ಬಿಡುಗಡೆ ಹೊಂದಿದನಾದರೂ, ಅವರವ್ವಳ ಬೆನ್ನುಜ್ಜಿನಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಕೆಂಪರ ಅವ್ವ ಶಿವಮ್ಮನೂ ಸಹ ನೀರುಯ್ಯೆದ್ರಲ್ಲಿ ಫೇಮಸ್ಸು. ಆದ್ರೆ ಶಿವಮ್ಮ ನೀರುಯ್ಯಿತ್ತಿದ್ದುದು ಆಗುಟ್ಟಿರ ಮಕ್ಳಿಂದ ಹಿಡಿದು ಒಂಭತ್ತು ತಿಂಗಳು ಒಳಗಿನವಕ್ಕೆ. ಬಾಣೀತನುಕ್ಕೆ ಅಂತ ತವರಿಗೆ ಬಂದಿರ ಹೆಣ್ಮಕ್ಳು ಇನ್ನ ಬಾಣೆತನ ಮುಗಿಸ್ಕೆಂಡು ಗಂಡನ ಮನಿಗೆ ಹೋಗತನ್ಕ ಅವರ ಮಕ್ಳುಗುಳಿಗೆ ನೀರುಯ್ಯಿತ್ತಿದ್ದುದು ಇದೇ ಶಿವಮ್ಮ. ತೊಡೆ ಮೇಲೆ ಮಕ್ಳುನ್ನ ಮಕಾಡೆ ಮಲಗಿಸ್ಕೆಂಡು ಅದವಾಗಿರ ನೀರ್ನ ತಂಬಿಗೆಲಿ ತುಂಬಿ ಉಯ್ದು, ಅವುಗಳ ತೊಲ್ಟೆ ತೆಗೆದು ಬಟ್ಟೆ ಸುತ್ತಿ ಕೊಡುತ್ತಿದ್ದಳು. ಅಂತ ಮಕ್ಳುನ್ನ ತಗಂಡೋಗಿ ತೊಟ್ಲಿಗೆ ಹಾಕಿರೆ ಇನ್ನ ಅವು ಎದೇಳ್ತಿದ್ದುದು ಮಧ್ಯಾಹ್ನುಕ್ಕೆಯ. ಒಂಭತ್ತು ತಿಂಗಳು ಒಳಗಿನ ಮಕ್ಳಿಗೆ ದಿನ ಬಿಟ್ಟು ದಿನ ನೀರುಯ್ಯಿತ್ತಿದ್ದ ಶಿವಮ್ಮ ಬೆಳೆದು ನಿಂತಿರ ತನ್ನ ಮಗ ಕೆಂಪನಿಗೆ ಶನಿವಾರದೊತ್ತು



ಕಲೆ: ವೆಂಕಟರಮಣ ಭಟ್